# ನಾಗತಿಹಳ್ಳಿ ಜೊತೆಗೆ ಒಡನಾಟದ ನೆನಪು!

ನಾಗತಿಹಳ್ಳಿ ಚಂದ್ರಶೇಖರ್ ಅವರೊಡಗೂಡಿ ಕೆಲಸ ಮಾಡಿದ ಅನುಭವ ಅನನ್ಯ. ಸಿನಿಮಾ ರಂಗದ ಹಿರಿಯ ನಿರ್ದೇಶಕರು, ಸಂಗೀತ ಸಾಹಿತಿಗಳೊಂದಿಗೆ ಸಹ ಒಡನಾಡಿದ್ದು ಇನ್ನೂ ನೆನಪಿನಂಗಳದಲ್ಲಿ ಹಸಿರಾಗಿಯೇ ಇದೆ.

■ ಭದ್ರಾವತಿ ಸಿ. ಶಿವರಾಂ



ಮೂವತ್ತೆರಡು ವರ್ಷಗಳ ಹಿಂದಿನ ಈ ಭಾವಚಿತ್ರ ನೂರೊಂದು ನೆನಪುಗಳನ್ನು ಸದಾ ಹಸಿರಾಗಿರುವಂತೆ ಮಾಡಿದೆ. ನಾನಾಗ ದಿ. ಶಂಕರ್‌ನಾಗ್ ಅವರ 'ಮಾಲ್ಗುಡಿ ಡೇಸ್' ಧಾರಾವಾಹಿಯ ಆಗುಂಬೆಯಲ್ಲಿ ಚಿತ್ರೀಕರಣದಲ್ಲಿ ಶಂಕರ್‌ನಾಗ್ ಅವರೊಂದಿಗೆ ಕೆಲಸ ಮಾಡಿದ್ದೆ. ಈ ಅನುಭವದ ಜೊತೆ ರಂಗ ನಾಟಕ, ಫೋಟೊಕಾಮಿಕ್ಸ್, ಬೀದಿನಾಟಕಗಳಿಂದ ರಾಜ್ಯದಾದ್ಯಂತ ಜನಸಾಮಾನ್ಯರ ಮೆಚ್ಚುಗೆ, ಪ್ರಶಸ್ತಿಗಳನ್ನು ಪಡೆದಿದ್ದೆ.

ಮುಂದಿನ ಭಾಗವಾಗಿ ಸಿನಿಮಾ ಕ್ಷೇತ್ರಕ್ಕೂ ಕಾಲಿಟ್ಟೆ. ಸ್ವಂತ ನಿರ್ದೇಶನದ ಚೊಚ್ಚಲ 'ರವಿಕಿರಣ' ಎಂಬ ಚಲನಚಿತ್ರಕ್ಕೆ ಕಥೆ, ಚಿತ್ರಕಥೆ, ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿದ್ದೆ. ಚಿತ್ರದ ಸಂಭಾಷಣೆ, ಹಾಡುಗಳನ್ನು ನಾಗತಿಹಳ್ಳಿ ಚಂದ್ರಶೇಖರ್‌ರವರಿಗೆ ವಹಿಸಿದ್ದೆ, ಆಗಿನ್ನು ನಾಗತಿಹಳ್ಳಿ ಜನಯನಗರದಲ್ಲಿರುವ ಬಿ.ಇ.ಎಸ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದರು. ಇವರನ್ನು ಎಲ್ಲರೂ ಬರೀ ಚಂದ್ರಶೇಖರಯ್ಯನೆಂದು ಕರೆಯುತ್ತಿರುವಾಗ ಆಗಿನ ಟ್ರೆಂಡ್ ತಮ್ಮ ಹೆಸರಿನ ಮೊದಲು ಊರಿನ ಹೆಸರನ್ನು ಸೇರಿಸಿಕೊಳ್ಳುವ ಪರಿಪಾಠ. ನಾನಾಗಲೇ ನನ್ನ ಹೆಸರಿನ ಮೊದಲು ಭದ್ರಾವತಿ ಸೇರಿಸಿ, ಭದ್ರಾವತಿ ಶಿವರಾಂ ಆಗಿದ್ದೆ. ಇದೇ ರೀತಿ ಅಂದಿನ ಚಂದ್ರಶೇಖರಯ್ಯ, ನಾಗತಿಹಳ್ಳಿ ಚಂದ್ರಶೇಖರ್ ಮಾಡಿಕೊಳ್ಳುವಂತೆ ವಿನಂತಿಸಿದ್ದೆ. ಇದಕ್ಕಾಗಿ ಅರ್ಜಿ ಸಲ್ಲಿಸಿ, ಗೆಜೆಟ್‌ನಲ್ಲಿ ಪ್ರಕಟಿಸಬೇಕಾಗಿತ್ತು. ಅದು ಬರಲಿಕ್ಕಾಗಿ ಸರ್ಕಾರಿ ಮುದ್ರಣದಲ್ಲಿ ಅಚ್ಚಾಗಲು ಬಂದು ಕುಳಿತಿತ್ತು. ನಾನೇ ನಾಲ್ಕು ಭಾರಿ ಮುದ್ರಣಕ್ಕೆ ತಿರುಗಿ ಕಡೆಗೆ, ಅಕ್ಷರ ಮೊಳೆ ಜೋಡಿಸಿ, ಮುದ್ರಣಗೊಳ್ಳುವವರೆಗೂ ಸರ್ಕಾರಿ ಮುದ್ರಣಾಲಯದಲ್ಲೇ ನಿಂತು ಮಾಡಿಸಿದ್ದೆ. ಅದರ ಪ್ರತಿಯನ್ನು ನಾಗತಿಹಳ್ಳಿ ಅವರಿಗೆ ತಂದು ಕೊಟ್ಟ ನೆನಪು ಇನ್ನೂ ಹಚ್ಚ ಹಸಿರಾಗಿಯೇ ಇದೆ.

ಈ ನೆನಪನ್ನು ನಾನಿಲ್ಲಿ ಯಾಕೆ ಪ್ರಸ್ತಾಪಿಸಿದೆನೆಂದರೆ, ನನ್ನ ಸಿನಿಮಾ 'ರವಿಕಿರಣ'ದ ಸಂಭಾಷಣೆ, ಹಾಡುಗಳನ್ನು ಬರೆದ ನಾಗತಿಹಳ್ಳಿ ಚಂದ್ರಶೇಖರ್ ಅವರ– ನನ್ನ ಗೆಳೆತನ ಒಡನಾಟ ಅನನ್ಯವಾಗಿತ್ತು, ಇವರೇ ಸಿನಿಮಾ ಹಾಡುಗಳ ಸಂಗೀತಕ್ಕೆ ಚಿತ್ರ ಬ್ರಹ್ಮ,ನಾಗರಹಾವು, ಸಾಕ್ಷಾತ್ಕಾರ, ರಂಗನಾಯಕಿ ಮುಂತಾದ ಅವಿಸ್ಮರಣೀಯ ಚಿತ್ರ ನೀಡಿದ ದಿ.ಪುಟ್ಟಣ್ಣ ಕಣಗಾಲ್‌ರ ಜೊತೆಗಾರ ಸ್ವರಸಾಮ್ರಾಟ್ ದಿ. ವಿಜಯಭಾಸ್ಕರ್ ಅವರನ್ನು ಆಯ್ಕೆ ಮಾಡಿದ್ದು, ನನ್ನ ಚಿತ್ರ 'ರವಿಕಿರಣ'ದ ನಾಲ್ಕು ಹಾಡುಗಳ ರಾಗ ಸಂಯೋಜನೆ ನಡೆದಿದ್ದು ಮದ್ರಾಸ್‌ನ ಆರ್.ಟಿ. ನಗರದ ಸ್ಟಾರ್ ಹೋಟೆಲ್‌ನಲ್ಲಿ ಅಲ್ಲಿಗೂ ನನ್ನ ಜೊತೆ ನಾಗತಿಹಳ್ಳಿ ಚಂದ್ರಶೇಖರ್ ಸಕ್ರಿಯವಾಗಿ ಭಾಗವಹಿಸಿ ನಾಲ್ಕು ಹಾಡುಗಳ ರಾಗ ಸಂಯೋಜನೆ ಮಾಡಿದ್ದು ಎಲ್ಲವೂ ನೆನಪಿನಲ್ಲಿದೆ. ಅಲ್ಲಿಂದ ಬೆಂಗಳೂರಿಗೆ ಬಂದು ಅಂದಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನಾಲ್ಕು ಹಾಡುಗಳಿಗೆ ಸಂಗೀತದ ರೆಕಾರ್ಡಿಂಗ್ ಮಾಡುವ ಸಂದರ್ಭದ ಈ ಭಾವಚಿತ್ರದಲ್ಲಿ ಕಸ್ತೂರಿ ಶಂಕರ್, ಪುತ್ತೂರು ನರಸಿಂಹನಾಯಕ್ ರಾಗ ಸಂಯೋಜನೆ ನಡೆಸಿದ ಅಪೂರ್ವ ನೆನಪಿನ ಈ ಚಿತ್ರ ಇನ್ನೂ ನನ್ನ ಮನಸ್ಸಿನಾಳದಲ್ಲಿ ಚಿಗುರೊಡೆದು ಹಸಿರಾಗಿಯೇ ಇದೆ.

ನನ್ನ ಚಿತ್ರ ಚಿತ್ರೀಕರಣವಾಗುವ ಹಂತದಲ್ಲಿ ನಿರ್ಮಾಪಕರ ಅಕಾಲಿಕ ಮರಣದಿಂದ ನಿಂತು ಹೋಗಿದ್ದು ನಿಜಕ್ಕೂ ವಿಪರ್ಯಾಸ, ಆದರೂ ನನ್ನ ನಾಗತಿಹಳ್ಳಿ ಚಂದ್ರಶೇಖರ್ ಗೆಳೆತನ, ಕೂಡ್ಲು ರಾಮಕೃಷ್ಣರ 'ಉದ್ಭವ', 'ಮುರಳಿಗಾನ ಅಮೃತಪಾನ' 'ನಿಲುಕದ ನಕ್ಷತ್ರ'ದಲ್ಲಿ ನಾನು ಸಹ ನಿರ್ದೇಶಕನಾಗಿ ಕೂಡ್ಲು ರಾಮಕೃಷ್ಣರ ಜೊತೆಯಾಗಿದ್ದೆ. ಹಾಗೆಯೇ ನನ್ನ ಜೊತೆ ನಾಗತಿಹಳ್ಳಿ ಕೂಡ ಈ ಎಲ್ಲ ಚಿತ್ರಗಳಿಗೆ ಹಾಡು, ಸಂಭಾಷಣೆ ಬರೆದಿದ್ದಾರೆ.

'ಉಂಡೂ ಹೋದ; ಕೊಂಡೂ ಹೋದ' ಚಲನಚಿತ್ರಕ್ಕೆ ನಾಗತಿಹಳ್ಳಿ ಮೊದಲ ನಿರ್ದೇಶನದ ಹೊಣೆ ಹೊತ್ತರೆ, ನಾನು ಸಹ ನಿರ್ದೇಶನ ಮತ್ತು ಕಲಾ ನಿರ್ದೇಶನ ವಹಿಸಿಕೊಂಡಿದ್ದೆ. ಆ ಸಂದರ್ಭದಲ್ಲಿ ನಾಗತಿಹಳ್ಳಿ ಹೇಳುತ್ತಿದ್ದ ಮಾತುಗಳೇನು....? 'ನಾವೆಲ್ಲಾ ಹಳ್ಳಿಗಾಡಿನಿಂದ ಬಂದಿದ್ದೀವಿ. ಈ ಸಿನಿಮಾ ಜಗತ್ತಿನಲ್ಲಿ ನೆಲೆಕಾಣಬೇಕಾದರೆ, ದಿನದ ಇಪ್ಪತ್ನಾಲ್ಕು ಗಂಟೆಯ ಜೊತೆಗೆ ಕನಸಿನಲ್ಲಿಯೂ ಹೈ ಅಲರ್ಟ್ ಆಗಿರಬೇಕು. ಎಚ್ಚರದಿಂದಿರಬೇಕು. ಹಾಗೇ ಸ್ನೇಹವೆಂದರೆ ಎಷ್ಟೇ ಕಷ್ಟದಲ್ಲಿಯೂ ಅದಕ್ಕೆ ಚ್ಯುತಿಬಾರದಂತೆ ಉಳಿಸಿಕೊಳ್ಳುವ ವಿಶ್ವಾಸ ವಿರಬೇಕೆಂದು ಒತ್ತಿ ಒತ್ತಿ ಹೇಳುತ್ತಿದ್ದರು.

ಒಂದು ಸನ್ನಿವೇಶದಲ್ಲಿ ದಿ. ವಿಜಯ ಭಾಸ್ಕರ್ ಹೇಳಿದ್ದು ಇಷ್ಟು... 'ಶಿವರಾಂ ಈ ಸಿನಿಮಾರಂಗ ನಿಮಗೆ ಒಗ್ಗಿ ಬರೋದಿಲ್ಲ. ನಿಮ್ಮ ಪ್ರಾಮಾಣಿಕತೆ, ನಂಬಿಕೆ, ವಿಶ್ವಾಸಕ್ಕೆ ಅರ್ಹವಾದ ಸ್ಥಳ ಸಿನಿಮಾರಂಗದಲ್ಲಿಲ್ಲ. ನಿಮಗಿದು ಹೊಂದುವಂತೆ ನನಗೆ ಕಾಣೋದಿಲ್ಲ, ನೀವು ಈ ಸಿನಿಮಾ ಕ್ಷೇತ್ರ ಬಿಟ್ಟು ಬೇರೇನಾದರೂ ಮಾಡುವುದು ಒಳಿತು'. ಅಂದಿನ ವಿಜಯಭಾಸ್ಕರ್ ಸಲಹೆಯಂತೆ ತಿರುಗಿ ನನ್ನ ಹುಟ್ಟೂರಾದ ಭದ್ರಾವತಿಗೆ ಹೊರಟು ಬಂದು, ಒಂದು ಕಡೆ ನೆಲೆ ನಿಂತು ಕೃಷಿಕನಾಗಿ ನಾನಿರುವ ಊರುನನ್ನ ಸುತ್ತಮುತ್ತಲಿನ ಸ್ಥಳದಲ್ಲಿ ಸಾವಿರಾರು ಗಿಡ ನೆಟ್ಟೆ. ಅವುಗಳಿಗೆ ನೀರು, ರಕ್ಷಣೆ ನೀಡಿ ಸಸಿಯಾಗಿದ್ದ ಗಿಡವನ್ನು ಹೆಮ್ಮರವಾಗಿ ಬೆಳೆದು ನಿಲ್ಲುವಂತೆ ಮಾಡಿದೆ.

ಹಾಗೇ 2000 ಇಸವಿಯಲ್ಲಿ ನನಗೆ ರಾಜ್ಯ ಸರ್ಕಾರದ ರಾಜ್ಯ ಪರಿಸರ ಪ್ರಶಸ್ತಿ, 2019ರಲ್ಲಿ ಬೀದಿನಾಟಕಕ್ಕೆ ಜೀವಮಾನ ಸಾಧನೆಗಾಗಿ ರಾಜ್ಯ ಬಯಲಾಟ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದ್ದು ಜೀವನದ ಸ್ಮರಣೀಯ ಘಟನೆಗಳಲ್ಲಿ ಒಂದು. ಇದನ್ನು ಸವಿನೆನಪಾಗಿ ಪರಿಗಣಿಸಿದ್ದು, ಇಲ್ಲಿ ದಾಖಲಿಸಿಕೊಳ್ಳಲೇ ಬೇಕು ಅನಿಸಿತು.

ನನ್ನ ಬಳಿ ಇರುವ ಮೂವತ್ತೆರಡು ವರ್ಷಗಳ ಹಿಂದಿನ ಈ ಪೋಟೊದಲ್ಲಿರುವ ವಿಜಯಭಾಸ್ಕರ್ ಈಗಿಲ್ಲ, ಆದರೂ ಸಿನಿಮಾ ಕ್ಷೇತ್ರದಲ್ಲಿ ಅವರ ಸಾಧನೆ ಎಲ್ಲರಿಗೂ ಅನುಕರಣೀಯ. ಅವರೊಂದಿಗೆ ಕಳೆದ ನೆನಪು ಎಂದಿಗೂ ಅಜರಾಮರ..!

■